ರೇಷ್ಮೆ ಬೆಲೆ ಕುಗ್ಗುತ್ತಿರುವುದರಿಂದ ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ಹಾನಿಯನ್ನು ತಪ್ಪಿಸುವ ಬಗ್ಗೆ

473 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ರೇಷ್ಮೆ, ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೇಷ್ಮೆ ದರವು ಕುಗ್ಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರೇಷ್ಮೆ ಬೆಳೆಗಾರರಿಗೆ ಯೋಗ್ಯ ಬೆಲೆ ಸಿಗುವಂತೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಇ) ಬೆಳಗಾವಿ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲು ಉತ್ತಮವಾದ ಹವಾಮಾನ ಇರುವುದರಿಂದ ಇಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲು ಯಾವ ಯಾವ ಪ್ರೋತ್ಸಾಹಗಳನ್ನು ಕೂಡಲಾಗಿದೆ?

ಈ) ಬೆಳಗಾವಿಯಲ್ಲಿ ರೇಷ್ಮೆ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗುವುದೇ?

ಉ) ಬೆಳಗಾವಿಯಲ್ಲಿ ರೇಷ್ಮೆ ಮಾರಾಟಕೇಂದ್ರ ಇಲ್ಲದೇ ಇರುವುದರಿಂದ ರಾಮನಗರಕ್ಕೆ ಹೋಗಿ ಮಾರಾಟ ಮಾಡಿ ಬರುತ್ತಿರುವುದರಿಂದ ಬೆಳೆಗಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಹೌದು

ಆ) ರೇಷ್ಮೆ ಗೂಡು ಕಚ್ಚಾ ರೇಷ್ಮೆಗೆ ಕನಿಷ್ಟ ಬೆಂಬಲ ಬೆಲೆ ನಿಗದಿ ಪಡಿಸುವ ಸಲುವಾಗಿ ಒಂದು ಸಮಿತಿಯನ್ನು ನೇಮಕ ಮಾಡಿದೆ.

ಇ)

1) 8 ರೇಷ್ಮೆ ಕೃಷಿ ಕ್ಷೇತ್ರಗಳನ್ನು ಸ್ಥಾಪಿಸಲಾಗಿದೆ.
2) 1 ಗ್ರೈನೇಜನ್ನು ಸ್ಥಾಪಿಸಲಾಗಿದೆ.
3) 3 ರೇಷ್ಮೆ ಗೂಡಿನ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ.
4) 7 ತಾಂತ್ರಿಕ ಸಲಹಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
5) 1 ರೇಷ್ಮೆ ನೂಲು ಬಿಚ್ಚಾಣಿಕೆ ತಾಂತ್ರಿಕ ಸಲಹಾ ಕೇಂದ್ರ ಸ್ಥಾಪಿಸಲಾಗಿದೆ.
6) 3 ಮಾದರಿ ಚಾರಿ ಸಾಕಾಣಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.
7) ನೂಲು ಬಿಚ್ಚಾಣಿಕೆ ಕೇಂದ್ರಗಳನ್ನು ಖಾಸಗಿ ವಲಯದಲ್ಲಿ ಸ್ಥಾಪಿಸಲಾಗಿದೆ.
8) ಉತ್ಪಾದನಾ ಮತ್ತು ತರಬೇತಿ ನೂಲು ಬಿಚ್ಚಾಣಿಕಾ ಘಟಕವನ್ನು ಸ್ಥಾಪಿಸಲಾಗಿದೆ.
9) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಕೊಡಲಾಗುತ್ತಿದೆ.
   ಅ) ಹೊಸದಾಗಿ ಹಿಪ್ಪುನೇರಳೆ ವ್ಯವಸಾಯ ಕೈಗೊಳ್ಳಲು ಪ್ರೋತ್ಸಾಹ ಧನ
   ಆ) ಪ್ರೋಗ್ರಾಂ ಆಫ್ ಪ್ಯಾಕೇಜ್ ಬೆನಿಫಿಟ್ಸ್
   ಇ) ರೇಷ್ಮೆ ಹುಳು ಸಾಕಣೆ ಮನೆ ಕಟ್ಟಲು ಸಹಾಯಧನ (ಶೇಕಡ 60 ರಷ್ಟು)
10. ಪಶ್ಚಿಮ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಕೊಡಲಾಗುತ್ತಿದೆ.
    ಅ) ಬೈವೋಲ್ಟೈನ್ ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ಹುಳು ಸಾಕಾಣಿಕಾ ಸಲಕರಣೆಗಳ ಸರಬರಾಜು

ಆ) ಹಿಪ್ಪುನೇರಳೆ ಸಸಿಗಳನ್ನು ಬೆಳೆಸಿ ಸರಬರಾಜು ಮಾಡುವುದು.

ಈ) ಹಾಲಿ 3ಗೂಡಿನ ಮಾರುಕಟ್ಟೆಗಳಿವೆ. ಕರ್ನಾಟಕ ರೇಷ್ಮೆ ಕೃಷಿ ಯೋಜನೆ-2ನೇ ಹಂತದಲ್ಲಿ ಒಂದು ರೇಷ್ಮೆ ಗೂಡಿನ ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಲಾಗುವುದು. ರೇಷ್ಮೆ ವಿನಿಮಯ ಕೇಂದ್ರವನ್ನು ಸ್ಥಾಪನೆ ಮಾಡಲು ಪರಿಶೀಲಿಸಲಾಗುವುದು.

ಉ) ಹೌದು.

ಬೈಲಹೊಂಗಲ ತಾಲ್ಲೂಕಿನ ತುರಕರಸೀಗೆಹಳ್ಳಿ ಗ್ರಾಮದಲ್ಲಿ ಬಿ.ಸಿ.ಎಂ ಹಾಸ್ಟೆಲ್.

472 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ತುರಕರಸೀಗೆಹಳ್ಳಿ ಗ್ರಾಮದಲ್ಲಿ ಪ್ರಿ ಮೆಟ್ರಿಕ್ಯುಲೇಷನ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಗ್ರಾಮದಲ್ಲಿ ಬಿ.ಸಿ.ಎಂ. ಹಾಸ್ಟೆಲ್ ಪ್ರಾರಂಭಿಸಲಾಗುವುದೆಂದು ಈ ಮೊದಲು ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿದಂತೆ ಇಲ್ಲಿ ಹಾಸ್ಟೆಲ್ ಪ್ರಾರಂಭಿಸಲು ಸರ್ಕಾರದವರು ಕೈಗೊಳ್ಳಲಾಗಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಈ ಗ್ರಾಮದಲ್ಲಿ ಬಿ.ಸಿ.ಎಂ. ಹಾಸ್ಟೆಲ್ ಪ್ರಾರಂಭಿಸಲಾಗುವುದೆಂದು ವಿಧಾನ ಸಭೆ ಆಶ್ವಾಸನೆ (ಸಂಖ್ಯೆ 2051) ನೀಡಿದಂತೆ ಪ್ರಸಕ್ತ ಸಾಲಿಗೆ 100 ಮೆಟ್ರಿಕ್ ಪೂರ್ವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದ್ದು ಈ ಗ್ರಾಮದಲ್ಲಿಯೂ ಸಹಾ ಒಂದು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಹೊಸದಾಗಿ ಬಂಗಾರದ ಗಣಿಗಳನ್ನು ಗುರುತಿಸುವ ಬಗ್ಗೆ.

474 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದಾಗಿ ಯಾವ ಯಾವ ಪ್ರದೇಶಗಳಲ್ಲಿ ಬಂಗಾರದ ಗಣಿಗಳನ್ನು ಗುರುತಿಸಲಾಗಿದೆ (ಸಂಪೂರ್ಣ ವಿವರ ಕೊಡುವುದು).

ಆ) ರಾಜ್ಯದಲ್ಲಿ ವಿಪುಲವಾಗಿ ಬಂಗಾರದ ಗಣಿಗಳು ಇದ್ದರೂ ಸಹ ಅದನ್ನು ಸದುಪಯೋಗ ಮಾಡುತ್ತಿರುವುದಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿವೆಯೇ?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) :

ಅ) ಹೊಸದಾಗಿ ಯಾವ ಚಿನ್ನದ ಅದಿರಿನ ನಿಕ್ಷೇಪವನ್ನು ಗುರುತಿಸದೇ ಇದ್ದರೂ ಈಗಾಗಲೇ ಗೊತ್ತಿರುವ ನಿಕ್ಷೇಪಗಳ ವಿಸ್ತಾರ ಮತ್ತು ಮುಂದುವರಿಕೆಗಳನ್ನು ಕಂಡು ಹಿಡಿಯಲಾಗಿದೆ.

ಆ) ಗದಗ ಪ್ರದೇಶದಲ್ಲಿ ಗುರುತಿಸಿರುವ ಚಿನ್ನದ ನಿಕ್ಷೇಪವು ಗಣಿ ಕಾರ್ಯಾಚರಣೆ ನಡೆಸಲು ಆರ್ಥಿಕವಾಗಿ ಲಾಬದಾಯಕವಾದಲ್ಲಿ ಮುಂದುವರಿಸಲಾಗುವುದು.